(ಈ) ಸಾಲವನ್ನು ಸಾಲಗಾರರಿಗೆ ಸಾಲ ಮಂಜೂರಾದ ಮಿತಿಗೆ ಒಳಪಟ್ಟು ಕೊಡಲಾಗುತ್ತದೆ. ಹಣ ಕಡಿಮೆ ಬಂದರೆ ಸಾಲಗಾರರೇ ಸ್ವತಃ ಹಣ ಹಾಕಿಕೊಂಡು ಕೆಲಸವನ್ನು ಪೂರ್ತಿ ಮಾಡಬೇಕಾಗಿದೆ. ಆದ್ದರಿಂದ ಇದು ಸಾಲಗಾರರ ಹೊಣೆ. ಮಂಜೂರಾದ ಮೊಬಲಗಿಂತ ಹೆಚ್ಚಿನ ಹಣವನ್ನು ಕಾರ್ಪೊರೇಷನ್ ಕೊಡುವುದಿಲ್ಲ.

Taking up a notice under Rule 50 by Sri P. Ramdev

ಶ್ರೀ ಪಿ. ರಾಂದೇವ್. — ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್ ನಾನು ರೂಲ್ ೫೦ರ ಪ್ರಕಾರ ಬೆಂಗಳೂರು ನಗರದ ನೀರಿನ ದೋಷದ ಬಗ್ಗೆ ಒಂದು ನೋಟೀಸ್ ಕಳುಹಿಸಿಕೊಟ್ಟಿದ್ದೇನೆ ಅದನ್ನು ಈಗ ತೆಗೆದುಕೊಳ್ಳಬೇಕೆಂದು ನನ್ನ ಪ್ರಾರ್ಥನೆ.

ಅಧ್ಯಕ್ಷರು. — ಈಗ ತಮ್ಮ ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ. ಅದನ್ನು ರೂಲ್ ೫೧೨ರ ಪ್ರಕಾರ ನಾಳೆ ತೆಗೆದುಕೊಳ್ಳೋಣ.

CALLING ATTENTION TO MATTERS OF URGENT PUBLIC IMPORTANCE

(i) *re : Police protection to people in Varthur and K.R. Puram Hoblies against robberies etc.*

SRI B.V. RAMACHANDRA REDDY (Varthur).—Sir, I call the attention of the Chief Minister to the need for police protection to the people of Varthur and Krishnarajapura Hoblies, Bangalore South Taluk against the robberies, dacoities and burglaries.

SRI D. DEVARAJ URS (Chief Minister).—Sir, I make the following statement :

In the months of October and November 1978, there were a series of robberies, dacoities and burglaries in the limits of K. R. Puram Police Station and in a few villages of Hosakote Police Station limits in Bangalore District. The gang of dacoits attacked a few houses indiscriminately in each area, broke open the doors and terrorised the inmates. The cases that were reported as a result of the activities of this gang were all registered in the concerned Police Stations and investigations was taken up. With a view to removing the scare in the minds of the public, special mobile patrols were deputed to the affected areas and special teams of officers were formed to nab the gang of dacoits.

The investigation teams working day and night fixed up the identity of the culprits. Thereafter they swung into action and 5 of the 6 dacoits were nabbed during the first week of this month and the gang leader on the 15th of this month. At a public meeting, the dacoits were shown to the public so as to create confidence among them. The Hon'ble Member of the Assembly (Shri Reddy) was also present at this function and was kind enough to inform the public about the swift aotion taken by the Police in providing mobile patrols to the area and in nabbing the gang of dacoits.

With the arrest of the gang, the Police were able to detect all the cases of dacoity and robbery that were reported during that period. The mobile patrols are continued in the affected areas.

The situation is now normal and the police mobiles are continuing to patrol the area intensively.

ಶ್ರೀ ಬಿ.ವಿ ರಾಮಚಂದ್ರ ರೆಡ್ಡಿ —ಮಾನ್ಯ ಅಧ್ಯಕ್ಷರೆ, ಮಾನ್ಯ ಮುಂಖ್ಯ ಮಂತ್ರಿಯವರು ತಮ್ಮ ಹೇಳಿಕೆಯಲ್ಲಿ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಈ ಡಕಾಯಿತನ ನಡೆದಿದೆಯೆಂದು ಹೇಳಿದ್ದಾರೆ. ಆದರೆ, ಇದು ನಿಜವಾಗಿಯೂ ಸತ್ಯಕ್ಕೆ ದೂರವಾದ ವಿಷಯ. ಈ ಕಳ್ಳತನಗಳು ನಡೆದಿರುವುದು ಡಿಸೆಂಬರ್ ತಿಂಗಳ ಕೊನೆಯಲ್ಲಿ ಮತ್ತು ಜನವರಿ ತಿಂಗಳ ಮೊದಲನೇ ವಾರದಲ್ಲಿ. ಈ ಪ್ರಕರಣದಲ್ಲಿ ಅಂದರೆ ಕಳೆದ ವರ್ಷ ಡಿಸೆಂಬರ್ ತಿಂಗಳ ೧೯, ೨೦, ಹಾಗೂ ೨೧ ರಂದು ಏನು ಪ್ರಕರಣಗಳು ನಡೆದುವು ಆದರಲ್ಲಿ ಕೆಲವು ಸಮಾಜಘಾತುಕ ಶಕ್ತಿಗಳನ್ನು ಸರ್ಕಾರದವರು ಉಪಯೋಗಿಸಿಕೊಂಡಿದ್ದಾರೆಂದು ಎಲ್ಲಕಡೆಯಲ್ಲೂ ಜನಗಳೇ ಹೇಳುತ್ತಿದ್ದಾರೆ. ಈ ಬೆಂಗಳೂರು ನಗರದಲ್ಲಿ ಗೋಲಿಬಾರ್ ಆದಾಗ ಸಮಾಜಘಾತುಕ ಶಕ್ತಿಗಳು ಹಳ್ಳಿಗಳ ಕಡೆ ಸೇರಿಕೊಂಡು ಧಾಳಿ ನಡೆಸಿದ್ದಾರೆ. ಇದಕ್ಕೆ ಕಾರಣ, ಕಾಂಗ್ರೆಸ್ ಅಧ್ಯಕ್ಷರನ್ನು ಬಂದಿಸಿದರೆ ದೇಶದಲ್ಲಿ ಅರಾಜಕತೆ ಉಂಟಾಗುತ್ತದೆಂದು ಕಾಂಗ್ರೆಸ್‌ನವರು ಹೇಳುತ್ತಿದ್ದುದರಿಂದ ಇದು ಆಗಿದೆ. ಕೃಷ್ಣರಾಜಪುರ, ವರ್ತೂರು, ಹೋಬಳಿಗಳಲ್ಲಿ ರಾಷ್ಟ್ರದ ಭಾರಿ ಭಾರಿ ಕೈಗಾರಿಕೆಗಳಿವೆ. ಉದಾಹರಣೆಗೆ ಹೇಳುವುದಾದರೆ, ಹೆಚ್.ಎ.ಎಲ್. ಬಿ.ಇ.ಎಲ್. ಎನ್.ಜಿ.ಇ.ಎಫ್. ಇನ್ನೂ ಮುಂತಾದುವು. ಇದೇ ಅಲ್ಲದೆ, ದೊಡ್ಡ ನೆಕ್ಕುಂಡಿ ಏರಿಯಾದಲ್ಲಿ ಸಣ್ಣ ಮತ್ತು ಮಧ್ಯಮ ವರ್ಗದ ಕಾರ್ಖಾನೆಗಳಿವೆ. ಆ ಕಾರ್ಖಾನೆಗಳಲ್ಲಿ ಜನಗಳು ೩ ಪಾಳಿಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ. ಅವರು ರಾತ್ರಿಹೊತ್ತು ತಮ್ಮ ತಮ್ಮ ಕೆಲಸಗಳನ್ನು ಮಾಡಿಕೊಂಡು ಮನೆಗೆ ಬರುವ ಸಮಯದಲ್ಲಿ ಈ ಡಕಾಯಿತರು ಅವರ ಮೇಲೆ ಬಿದ್ದು ಈಗಲೂ ಹಲ್ಲೆ ನಡೆಸುತ್ತಿದ್ದಾರೆ. ಎರಡನೇ ಪಾಳಿಯಲ್ಲಿ ಕೆಲಸ ಮಾಡಿಕೊಂಡು ಮನೆಗಳಿಗೆ ವಾಪಸ್ಸು ಬರತಕ್ಕ ಕಾರ್ಮಿಕರಿಗೆ ಚಾಕು, ಸೈಕಲ್ ಚೈನು, ಬ್ಲೇಡು ಇತ್ಯಾದಿಗಳಿಂದ ಹೊಡೆದು ದುಡ್ಡು, ವಾಚು ಕಿತ್ತುಕೊಂಡು ಹೋಗುತ್ತಾರೆ. ಎರಡನೆ ಪಾಳಿ ಮುಗಿಸಿಕೊಂಡು ಕಾರ್ಮಿಕರು ಮನೆಗಳಿಗೆ ಹೋದರೆ ಅವರ ಹೆಂಗಸರು ಹೆದರಿಕೊಂಡು ಗಂಡನೋ, ಷಂಡನೋ ಯಾರೋ ಬಂದಿದ್ದಾರೆ. ಬಾಗಿಲು ತೆಗೆದರೆ ಏನು ಆಪತ್ತು ಬರುತ್ತದೋ ಎಂದು ಅವರು ಬಾಗಿಲನ್ನೇ ತೆಗೆಯುವುದಿಲ್ಲ. ಆ ಕಾರ್ಮಿಕರು ಹೊರಗಡೆ ಜಗುಲಿಯ ಮೇಲೆ ಮಲಗಿ ಕಾಲಕಳೆಯಬೇಕಾದ ಪರಿಸ್ಥಿತಿ ಬಂದಿದೆ. ಇದರಿಂದಾಗಿ ಆ ಕಾರ್ಮಿಕರು ತಮ್ಮ ಕಾರ್ಖಾನೆಯ ಮಾಲೀಕರನ್ನು, ನಾವು ಮನೆಗೆ ಇಷ್ಟು ಹೊತ್ತಲ್ಲೆ ಹೋಗುವುದಿಲ್ಲ. ನಮಗೆ ಓವರ್ ಟೈಂ ಕೆಲಸ ಕೊಡಿ ಮಾಡುತ್ತೇವೆಂದು ಕೇಳುತ್ತಿದ್ದಾರೆ.

ಇನ್ನು ಕಡೆಯದಾಗಿ ಮಾನ್ಯ ಮುಂಖ್ಯ ಮಂತ್ರಿಯವರು ತಮ್ಮ ಹೇಳಿಕೆಯಲ್ಲಿ.

"The situation is now normal and the Police mobiles are continuing to patrol the area intensively."

ಎಂದು ಹೇಳಿದ್ದಾರೆ. ಆಂದರೆ ಡಕಾಯಿತನ ನಡೆದಿದೆ ಎಂಬುದನ್ನೂ ಅವರು ಒಪ್ಪಿಕೊಂಡಿದ್ದಾರೆ. ಆದುದರಿಂದ ಆ ಸಂದರ್ಭದಲ್ಲಿ ಎಷ್ಟು ಮಾನಭಂಗಗಳಾಗಿವೆ, ಎಷ್ಟು ಜನಗಳಿಗೆ ಗಾಯಗಳಾಗಿವೆ, ಎಷ್ಟು ಕಳ್ಳತನಗಳಾಗಿವೆ, ಆದರ ಅಂದಾಜು ಎಷ್ಟು, ಅಲ್ಲದೆ ಈ ಕಳ್ಳರನ್ನು ಹಿಡಿದಮೇಲೆ ಅವರಿಂದ ವಶಪಡಿಸಿಕೊಂಡಿರುವ ಮಾಲಿನ ಮೊತ್ತವೆಷ್ಟು ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಯವರು ಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಾಚೇಗೌಡ.—ಸ್ವಾಮಿ, ಹೊಸಕೋಟೆ ತಾಲ್ಲೂಕು ಹಾಗೂ ಕೃಷ್ಣರಾಜಪುರಂ ತಾಲ್ಲೂಕಿನಲ್ಲಿ ಸುಮಾರು 2–2½ ತಿಂಗಳ ಕಾಲದವರೆಗೆ ತಾವು ಏನು ಪೋಲಿಸ್ ಪಹರೆ ಏನು ಹಾಕಿದ್ದೀರಿ ಅವರು ಚೆನ್ನಾಗಿ ಸಾರಾಯಿ ಕುಡಿದುಕೊಂಡು ಎಲ್ಲೋ ಮಲಗಿರುತ್ತಿದ್ದರು. ಅವರು ಯಾರಿಗೂ ರಕ್ಷಣೆಯನ್ನೇ ಕೊಟ್ಟಿಲ್ಲ. ಈಗತಾನೇ ಮಾನ್ಯ ಸದಸ್ಯರಾದ ಶ್ರೀ ರಾಮಚಂದ್ರ ರೆಡ್ಡಿಯವರು ಕೇಳಿದ ಪ್ರಕಾರ ಆ ಪ್ರದೇಶದಲ್ಲಿ ಎಷ್ಟು ಕಳ್ಳತನಗಳಾಗಿವೆ, ಎಷ್ಟು ಜನರಿಗೆ ಗಾಯಗಳಾಗಿವೆ, ಎಷ್ಟು ಮಾನಭಂಗಗಳಾಗಿವೆ, ಆ ಬಗ್ಗೆ ತಾವು ಎಷ್ಟು ಕೇಸುಗಳನ್ನು ರಿಜಿಸ್ಟರ್ ಮಾಡಿ, ಆ ಕಳ್ಳರಿಂದ ಎಷ್ಟು ಮೊತ್ತದ ಮಾಲನ್ನು ವಾಪಸ್ಸು ಪಡೆದುಕೊಂಡಿದ್ದೀರಿ ಎಂಬುದನ್ನು ತಾವು ಸಭೆಗೆ ತಿಳಿಸಬೇಕು.

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆ ಏನು, ಎಂಬುದರ ಒಂದು ಕಾಪಿ ನನ್ನಲ್ಲಿದೆ. ಅವರು ಕೇಳಿರತಕ್ಕ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕೊಟ್ಟಿದ್ದೇನೆ. ಈಗ ಅವರು ಏನು ಹೇಳುತ್ತಾರೆಂದರೆ, ನಾನು ಕೇಳಿರುವುದು ಅಕ್ಟೋಬರ್, ನವೆಂಬರ್ ತಿಂಗಳಲ್ಲಿ ನಡೆದಿದ್ದಲ್ಲ. ಡಿಸೆಂಬರ್‌ನಲ್ಲಿ ನಡೆದಿರುವುದು ಬೇಕೆಂದು. ನಾನು ಈಗ ಕೊಟ್ಟಿರುವ ಉತ್ತರವನ್ನು ಮಾನ್ಯ ಸದಸ್ಯರು ಸತ್ಯಕ್ಕೆ ದೂರವಾದುದೆಂದು ಹೇಳಿ ಏನೂ ಹೇಳಿದರು ಅದು ಸರಿಯಲ್ಲ. ಆ ಪ್ರದೇಶದಲ್ಲಿ ದರೋಡೆ ನಡೆದಿರುವುದು ನಿಜ. ಪೇಪರ್‌ನಲ್ಲಿ ಡಕಾಯಿತರ ಫೋಟೋ ಕೂಡ ಬಂದಿದೆ. ಸದಸ್ಯರು ಪ್ರಶ್ನೆ ಕೇಳುವಾಗಲೇ ಇಂಥ ತಿಂಗಳಲ್ಲಿ ನಡೆದ ಘಟನೆ ಬಗ್ಗೆ ಉತ್ತರ ನೀಡಿ ಎಂದು ಕೇಳಿದ್ದರೆ ಅದರಂತೆ ಸೂಕ್ತ ಉತ್ತರ ನೀಡುತ್ತಿದ್ದೆ. ಈಗ ಅವರು ಏನು ಪ್ರಶ್ನೆಯನ್ನು ಕೇಳಿದ್ದಾರೆ ಅದಕ್ಕೆ ಸೂಕ್ತ ಉತ್ತರವನ್ನು ತಮ್ಮ ಮುಂದಿಟ್ಟಿದ್ದೇನೆ. ಇಲ್ಲಿ ಒಂದು ದೊಡ್ಡ ಪಟ್ಟಿಯೇ ಇದೆ. ಬೇಕಾದರೆ ನೋಡಿಕೊಳ್ಳಬಹುದು.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಮುಖ್ಯ ಮಂತ್ರಿಯವರನ್ನು ಕೇಳುತ್ತಿದ್ದೇನೆ. ಇದು ಒಂದು ಮುಖ್ಯವಾದ ವಿಷಯವಾಗಿರುತ್ತದೆ. ಹೊಸ ಐಜಿಪಿ ಯವರು ಬಂದಮೇಲೆ ಸರ್ಕಾರದವರು ಒಂದು ಸೂಚನೆಯನ್ನು ಕೊಟ್ಟಿದ್ದಾರೆ, ಎಲ್ಲಿ ಪುಂಡಾಟಿಕೆ ನಡೆಯುತ್ತಿದೆ, ಅದನ್ನು ತಡೆಗಟ್ಟಬೇಕಾಗುತ್ತದೆ ಎಂದು ಹೇಳಿದ್ದಾರೆ. ಆನಂತರ ಐ.ಜಿ.ಪಿ. ಯವರು ಸಾರ್ವಜನಿಕರು ಯಾವುದೇ ಭಯಭೀತಿಯನ್ನು ಪಡೆದೆ ಡಾಕ್ಟರವರ ಹತ್ತಿರ ಔಷಧಿಗೆ ಹೋಗುವಂತೆ, ತಮಗೆ ಏನೇ ತೊಂದರೆ ಬರಲಿ ಅದನ್ನು ನಮ್ಮ ಗವಮನಕ್ಕೆ ತರಬಹುದೆಂದೂ ಕೂಡ ಹೇಳಿದ್ದಾರೆ. ಬೆಂಗಳೂರಿನಲ್ಲಿ ಪುಂಡಾಟಿಕೆ ಮಾಡತಕ್ಕಂಥ ಜನರು ಇದ್ದಾರೆ. ಯಾವಾಗಲು ಸೈಕಲ್‌ಚೈನು, ಚಾಕು, ಬ್ಲೇಡು ಇತ್ಯಾದಿಗಳನ್ನು ಇಟ್ಟುಕೊಂಡು ಪುಂಡಾಟಿಕೆ ಮಾಡತಕ್ಕಂಥ ಒಂದು ವರ್ಗದ ಜನರೇ ಇದ್ದಾರೆ. ಅಂಥವರು ಎಷ್ಟು ಜನರು ಇದ್ದಾರೆಂಬುದನ್ನು ಪತ್ತೆ ಮಾಡಿದ್ದೀರಾ ? ಹಾಗೆ ಪತ್ತೆ ಮಾಡಿದ್ದರೆ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿರುತ್ತೀರಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ತಮಗೆ ಆದರ ಮಾಹಿತಿ ಬೇಕಾದರೆ ಕೊಡುತ್ತೇನೆ. ಒಂದು ವಿಚಾರವೆಂದರೆ ಹಿಂದೆ ೧೯೭೪ನೇ ಇಸವಿಯಲ್ಲಿ ಕೇಂದ್ರ ಸರ್ಕಾರದವರು ಮಾಡಿದಂಥ ಒಂದು ಕಾನೂನನ್ನು ಇನ್ನೂವರೆಗೆ ಜಾರಿಗೆ ಕೊಟ್ಟಿಲ್ಲ. ಅದನ್ನು ಕೊಡುವುದಕ್ಕೆ ಸಾಧ್ಯವೆ ಎಂದು ಕೇಂದ್ರ ಸರ್ಕಾರವನ್ನು ಮನವಿ ಮಾಡಿಕೊಳ್ಳಬೇಕಾಗಿದೆ. ಪುಂಡಾಟ ಮಾಡತಕ್ಕಂಥವರನ್ನು ಯಾವರೀತಿ ಹತೋಟಿಗೆ ತರಬೇಕು ಎನ್ನುವ ಬಗ್ಗೆ ಒಂದು ಹೊಸ ಕಾನೂನನ್ನೆ ಹುಡುಕಬೇಕಾಗಿದೆ. ಈಗಿರತಕ್ಕಂಥ ಪೋಲೀಸ್ ಅಧಿಕಾರ ಪುಂಡಾಟಿಕೆಯನ್ನು ನಿಲ್ಲಿಸುವುದಕ್ಕೆ ಸಾಕಷ್ಟು ಸಾಗುವುದಿಲ್ಲ ಎನ್ನುವುದಾದರೆ ಇದನ್ನು ನಿಲ್ಲಿಸುವುದಕ್ಕೆ ಮುಂದೆ ಏನು ಮಾಡಬೇಕು ಎನ್ನುವ ಬಗ್ಗೆ ಸರ್ಕಾರದ ಮುಂದೆ ಈ ವಿಷಯ ಇರುತ್ತದೆ. ಕೇಂದ್ರ ಸರ್ಕಾರ ಮಾಡಿರತಕ್ಕಂಥ ಕಾನೂನಿನಿಂದಲೇ ಸಾಕಷ್ಟು ಬಲವಿದೆ ಎನ್ನುವುದಾದರೆ, ಅದನ್ನೆ ಜಾರಿಗೆ ಕೊಡಲಿ. ೧೯೭೪—೭೫ನೇ ಇಸವಿಯಲ್ಲಿ ಮಾಡಿದಂಥ ಕಾನೂನನ್ನು ಜಾರಿಗೆ ಕೊಡುತ್ತಾರೋ ಇಲ್ಲವೋ ಅದು ತಿಳಿದಿಲ್ಲ. ಅದನ್ನು ತರಿಸುತ್ತೇನೆ. ಅವರು ಅದನ್ನು ಜಾರಿಗೆ ತಂದು ನಾವು ಅಡಾಪ್ಟ್ ಮಾಡಬೇಕೆಂದು ಹೇಳಿದರೆ ಅಡಾಪ್ಟ್ ಮಾಡೋಣ.

ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ.—ಒಬ್ಬ ಫ್ಯಾಕ್ಟರಿ ಕಾರ್ಮಿಕನಿಗೆ ಚಾಕುವನ್ನು ಉಪಯೋಗಿಸಿ ನರವನ್ನು ಕತ್ತರಿಸಿ ಹಾಕಿರುತ್ತಾರೆ. ಅವನನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಿ ಅಲ್ಲಿ ಆಪರೇಷನ್ ಕೂಡ ಮಾಡಿರುತ್ತಾರೆ. ಅವರ ಹೆಸರನ್ನು ಕೊಟ್ಟರೆ ಏನಾದರೂ ಸಹಾಯ ಮಾಡಲು ಸಾಧ್ಯವೇ ?

ಶ್ರೀ ಡಿ ದೇವರಾಜ ಅರಸ್.—ಕೊಡಿ ಅದನ್ನು ಹೇಳುತ್ತೇನೆ.

(ii) re: Interruption in supply of ElectriCity in Belgaum City

SRI B. B. SAYANAK (Belgaum) .— Sri, I call the attention of the Minister of State for Information and Youth Services to the interruption in supply of electricity in Belgaum City.

SRI K. B. SHIVAIAH (Minister for Sericulture) .— Sir, on behalf of the Minister of State for Information and Youth Services, I wish to make the following statement:—

My attention has been called to the interruption in supply of electricity in Belgaum resulting in non-supply of water thereby inconveniencing both industrialists and the public and in this connection I make the following statement:

There were power interruptions in Belgaum City on the following days during January 1979.

10-1-1979	From	19-37	Hours	to 6-20	Hours.
13-1-1979	From	19-50	,,	0-27	,,
16-1-1979	From	11-36	,,	11-47	,,
		16-47	,,	16-56	,,
22-1-1979	From	12-58	,,	13-24	,,
		17-02	,,	17-25	,,
		20-05	,,	20-20	,,
28-1-1979	From	9-33	,,	16-46	,,

The unforeseen and long interruptions in power supply to Belgaum City on 10-1-1979 and 13-1-1979 were due to the snapping of conductor on 110 K. V. Hubli-Belgaum transmission line and failure of 11 K. V. pin insulators in the City area distribution system respectively. The interruptions on 16th and 22nd were due to the load shedding effected to restrict the load to the available generating capacity and expected imports. The interruption on 28-1-1979 was due to pre-arranged shut-down for maintenance works.

SRI B. B. SAYANAK.—The statement prepared by the Electricity Board is not correct; it is a bogus one. They have given statistics of the month of January only, but not February and March. Everyday there is interruption of power supply and that is why I have sent this notice. I request the Minister to set right things so that power supply is available to Belgaum City without interruptions.